ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಲ್ಲಿ ಮಾನ್ಯತೆ ಪಡೆದು ನಿಯಮಗಳನ್ವಯ ಅನುದಾನ ಪಡೆಯದ ಸಂಸ್ಥೆಗಳು

ಕ್ರ. ಸಂ.	ಮತೀಯ, ಅಲ್ಪಸಂಖ್ಯಾತರ, ವಿದ್ಯಾರ್ಥಿನಿಲಯದ ಹೆಸರು	ಮಾನ್ಯತೆ ನೀಡಿದ ವರ್ಷ	ಸಂಖ್ಯಾಬಲ
	ಬೆಳಗಾಂ ಜಿಲ್ಲೆ		
1.	ಜ್ಞಾನಮಾತಾ ಬಾಲಭವನ ನಿಲಯ, ಬೆಳಗಾಂ ಟೌನ್, ಬೆಳಗಾಂ.	91-92	25
2.	ಅಂಜುಮಾನ್ ಎ. ಇಸ್ಲಾಂ, ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ, ರಾಮದುರ್ಗ	91-92	25
3.	ಡಿವೈನ್ ಪ್ರಾವಿಡೆನ್ಸ್ ಅಲ್ಪಸಂಖ್ಯಾತರ ಹಾಸ್ಟೆಲ್ ಬೆಳಕವಾಡಿ, ಬೆಳಗಾಂ	94-95	25
	ಬಿಜಾಪುರ ಜಿಲ್ಲೆ		
4.	ಶ್ರೀ ಅಂಜುಮಾನ್ ಫ್ರೀ ಬೋರ್ಡಿಂಗ್, ಇಂಡಿ	91-92	50
	ಧಾರವಾಡ ಜಿಲ್ಲೆ		
5.	ನವೋದಯ ವಿದ್ಯಾಸಮಿತಿ ಉಚಿತ ಪ್ರಸಾದ ನಿಲಯ ಬನ್ನೂರ ಶಿಗ್ಗಾವಿ ತಾಲ್ಲೂಕು	91-92	50
			175

ಕೈಮಗ್ಗ ಸಹಕಾರ ಸಂಘಗಳಿಗೆ ಕಚ್ಚಾವಸ್ತುಗಳ ಸರಬರಾಜು

1960 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೈಮಗ್ಗ ಸಹಕಾರ ಸಂಘಗಳಿಗೆ ಬೇಕಾಗುವ ಹತ್ತಿ, ನೂಲು, ರೇಷ್ಮೆ ಮತ್ತು ಪಾಲಿಯೆಸ್ಟರ್ ಬಣ್ಣದ ರಾಸಾಯನಿಕ ಪದಾರ್ಥಗಳನ್ನು ಮಾರುಕಟ್ಟೆ ಧಾರಣೆಗಿಂತ ಕಡಿಮೆ ಧಾರಣೆಯಲ್ಲಿ ಸರಬರಾಜು ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುವುದೇ?*

ಆ) *ಆಂಧ್ರ ಪ್ರದೇಶದಲ್ಲಿ ಹಾಗೂ ತಮಿಳುನಾಡಿನಲ್ಲಿ ಇಂಥ ಒಂದು ವ್ಯವಸ್ಥೆ ಇರುವುದರಿಂದ ನೇಕಾರ ಸಹಕಾರ ಸಂಘಗಳು ಹೆಚ್ಚು ಪ್ರಗತಿ ಸಾಧಿಸುತ್ತಿರುವುದನ್ನು ಸರ್ಕಾರವು ಗಮನಿಸಿಲ್ಲವೇ? ಹಾಗಿದ್ದಲ್ಲಿ ಅಂಥ ವ್ಯವಸ್ಥೆಯನ್ನು ರಾಜ್ಯದಲ್ಲಿಯೂ ಜಾರಿಗೆ ತರಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು) :

ಅ) ಹತ್ತಿ, ನೂಲು, ರೇಷ್ಮೆ ಮತ್ತು ಪಾಲಿಯೆಸ್ಟರ್ ನೂಲುಗಳ ಧಾರಣೆ ನಿಗದಿ ಪಡಿಸಲು

ನೂಲಿನ ದರ ನಿಗದಿ ಸಮಿತಿಯಿದೆ. ಆದರೆ ಬಣ್ಣದ ರಾಸಾಯನಿಕ ಪದಾರ್ಥಗಳನ್ನು ಮಾರುಕಟ್ಟೆ ಧಾರಣೆಗಿಂತ ಕಡಿಮೆ ಧಾರಣೆಯಲ್ಲಿ ಸರಬರಾಜು ಮಾಡುವ ಯಾವುದೇ ಯೋಜನೆಯಿಲ್ಲ.

ಅ) ಈ ಬಗ್ಗೆ ಮಾಹಿತಿ ಪಡೆದು ಪ್ರಸ್ತಾವನೆ ಪರಿಶೀಲಿಸಲಾಗುವುದು.

ಕೈಮಗ್ಗ ನೇಕಾರರಿಗೆ ವೈದ್ಧಾಪ್ಯ ವೇತನ ಮಂಜೂರು

1963 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೈ ಮಗ್ಗ ನೇಕಾರರಿಗೆ ವೃದ್ಧಾಪ್ಯ ವೇತನ ಕೊಡುವ ಯೋಜನೆಯು ಜಾರಿಯಲ್ಲಿದೆಯೇ? ಹಾಗಿದ್ದಲ್ಲಿ ಅದರ ವಿವರಗಳೇನು; ಹಾಗಿಲ್ಲದಿದ್ದಲ್ಲಿ ಆ ಕುರಿತು ಸರ್ಕಾರ ಯೋಜಿಸಿದೆಯೇ?*

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು) :

ಅ) ಸರ್ಕಾರ ಕೈಮಗ್ಗ ನೇಕಾರರಿಗೆ ಮಾಶಾಸನ ನೀಡುವ ಪ್ರಸ್ತಾವನೆಗೆ ದಿನಾಂಕ : 13-8-93ರಲ್ಲಿ ಹೊರಡಿಸಿರುವ ಆದೇಶದಲ್ಲಿ ತಾತ್ವಿಕವಾಗಿ ಒಪ್ಪಿದೆ. ಯೋಜನೆಯ ವಿವರಗಳನ್ನು ತಯಾರಿಸಲಾಗುತ್ತಿದೆ. ಈ ಸಂಬಂಧಿತ ಆಡಳಿತಾತ್ಮಕ ಕೆಲಸಗಳನ್ನು ಮುಗಿಸಿದ ನಂತರ ಯೋಜನೆಯ ಅನುಷ್ಠಾನಗೊಳಿಸಲಾಗುವುದು.

ಮೈಸೂರು ನಗರಕ್ಕೆ ಮೇಳಾಪುರ ನೀರು ಸರಬರಾಜು ಯೋಜನೆ

1964 - ಶ್ರೀ ಇ. ಮಾರುತಿ ರಾವ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರಕ್ಕೆ ಮೇಳಾಪುರ ನೀರು ಸರಬರಾಜು ಯೋಜನೆ, ಅನ್ನಯ ಏಷ್ಯಾಭಿವೃದ್ಧಿ ಬ್ಯಾಂಕ್ ನೀಡುವ ನೆರವಿನ ಅಡಿಯಲ್ಲಿ ಕಾಮಗಾರಿ ಪ್ರಾರಂಭವಾಗಿದೆಯೇ?*

ಆ) *ಇದುವರೆಗೂ ಈ ಕಾಮಗಾರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಭೌತಿಕ ಪ್ರಗತಿ ಏನು? ಈ ಯೋಜನೆಯನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ ನರಸಿಂಹರಾಜ ಕ್ಷೇತ್ರಕ್ಕೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು. ತೆಗೆದುಕೊಂಡು ಕ್ರಮವೇನು?*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಪ್ರಾರಂಭವಾಗುವ ಹಂತದಲ್ಲಿದೆ.

ಆ) ಈಗಾಗಲೇ ಮಂಜೂರಾಗಿರುವ ನಾಲ್ಕು ಕಾಮಗಾರಿಗಳ ಪೈಕಿ ಒಂದು ಕಾಮಗಾರಿಗೆ ಸಾಮಗ್ರಿ ಸಂಪನ್ಮೂಲ ಮುಂಗಡ ಹಣವಾಗಿ 73 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯನ್ನು 2000ನೇ ಇಸವಿ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.